ತ್ರೈಮಾಸಿಕ ಪತ್ರಿಕೆ
ಡಿಸೆಂಬರ್ - 2022
ಖಾಸಗಿ ಪ್ರಸಾರಕ್ಕಾಗಿ ಮಾತ್ರ
Email: ashrayausa@gmail.com
www.ashraya-usa.org

# ಆಶ್ರಯ ಫೌಂಡೇಷನ್

# ಕೆಫೆ ಸೆನ್‌ಸೋರಿಯಮ್

**ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ**

*ಕೆಫೆ ಸೆನ್‌ಸೋರಿಯಮ್ ಶಾಲೆಗಳು: ಸರ್ಕಾರಿ ಟೌನ್ ಹಿ.ಪ್ರಾ.ಶಾಲೆ ಗುಂಡ್ಲುಪೇಟೆ, ಸ.ಹಿ.ಪ್ರಾ.ಶಾಲೆ ರಾಘವಪುರ, ಸ.ಹಿ.ಪ್ರಾ.ಶಾಲೆ ಕೂತನೂರು, ಸ.ಹಿ.ಪ್ರಾ.ಶಾಲೆ ಶಿಂಡನಪುರ, ಸ.ಹಿ.ಪ್ರಾ.ಶಾಲೆ ಅಣ್ಣೂರುಕೇರಿ, ಸ.ಹಿ.ಪ್ರಾ.ಶಾಲೆ ನೇನೇಕಟ್ಟೆ, ಸ.ಹಿ.ಪ್ರಾ.ಶಾಲೆ ಹೊನ್ನಶೆಟ್ಟರಹುಂಡಿ, ಸ.ಹಿ.ಪ್ರಾ.ಶಾಲೆ ಬನ್ನೀತಾಳನಪುರ, ಸ.ಹಿ.ಪ್ರಾ.ಶಾಲೆ ಪಡಗೂರು.*

## ಸಂಪಾದಕರ ನುಡಿ . . .

ಮಗುವು ತನ್ನ ಆಸಕ್ತಿ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಕಲಿಕೆಯಲು ಇಚ್ಛಿಸಿದಾಗ ತನ್ನ ಗುರಿಯನ್ನು ಮುಟ್ಟಲು ಸಾಧ್ಯವಾಗುತ್ತದೆ. ಚಟುವಟಿಕೆ ಆಧಾರಿತ ಕಲಿಕೆಯು ಮಕ್ಕಳ ಜ್ಞಾನವನ್ನು ಸ್ಥಿರಗೊಳಿಸುತ್ತದೆ. ಆಸಕ್ತಿಯನ್ನು ಹೆಚ್ಚಿಸಿ ಕಲಿಕೆಗೆ ಪೂರಕವಾದ ವಾತಾವರಣವನ್ನು ಉಂಟುಮಾಡುತ್ತದೆ. ವಿದ್ಯಾರ್ಥಿ ಕೇಂದ್ರಿತ ಕಲಿಕೆಗೆ ಹೆಚ್ಚು ಒತ್ತು ನೀಡುವುದಲ್ಲದೆ ಮಕ್ಕಳ ವಯೋಮಾನಕ್ಕೆ ತಕ್ಕಂತೆ ಚಟುವಟಿಕೆಗಳನ್ನು ಆಶ್ರಯ ಸಂಸ್ಥೆಯು ಯೋಜಿಸಿ ಜ್ಞಾನ ಬತ್ತಳಿಕೆಯನ್ನು ಇಮ್ಮಡಿಗೊಳಿಸುತ್ತಿದೆ.

**ಸಾವುಕರಾಜು. ಡಿ., ಕೊಳ್ಳೇಗಾಲ**
**ಸ.ಹಿ.ಪ್ರಾ.ಶಾಲೆ, ಕಣ್ಣೂರು ಹನೂರು ತಾ. . .**

## ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ಆಲ್‌ರೌಂಡರ್ ಕ್ಲಬ್

ನಿರ್ದಿಷ್ಟ ವಿಷಯಕ್ಕೆ ಸೀಮಿತವಾಗದೆ ವಿಷಯ ಎಲ್ಲೆಯನ್ನು ಸವಿಸ್ತಾರಗೊಳಿಸುವುದರ ಮೂಲಕ ಮಕ್ಕಳಿಗೆ ಸಕಲ ಜ್ಞಾನವನ್ನು ವಿವಿಧ ಕ್ಷೇತ್ರದಲ್ಲಿ ನೈಪುಣ್ಯತೆಯನ್ನು ಹೆಚ್ಚಿಸುವ ಸಲುವಾಗಿ ಆಲ್‌ರೌಂಡರ್ ಕ್ಲಬ್ ಪ್ರಾರಂಭಿಸಲಾಗಿದೆ. ಆಗ ಮಾತ್ರ ನಿರೀಕ್ಷಿತ ಕಲಿಕೆ ಅರ್ಥಪೂರ್ಣವಾಗುತ್ತದೆ. ಈ ನಿಟ್ಟಿನಲ್ಲಿ ಬೆಂಗಳೂರಿನ ಆಶ್ರಯ ಸಂಸ್ಥೆಯು ದಾಪುಗಾಲು ಹಾಕುತ್ತಾ ಮಕ್ಕಳಿಗೆ ವಿಜ್ಞಾನ ಪ್ರಾಜೆಕ್ಟ್‌ಗಳ ಮೂಲಕ ಸ್ವಕಲಿಕೆಗೆ ಆದ್ಯತೆ ನೀಡುತ್ತಿದೆ. ಮಗು ಪ್ರತಿಯೊಂದು ವಿಷಯದಲ್ಲೂ ತನ್ನ ಸ್ವಸಾಮರ್ಥ್ಯದಿಂದ ಜ್ಞಾನ ಗಳಿಸಲು ಅನುಕೂಲವಾಗುತ್ತಿದೆ. ಬುಕ್ ಕ್ಲಬ್‌ನ ಮೂಲಕ ಕಥೆ ಬರೆಯುವುದು, ಕಂಪ್ಯೂಟರ್‌ನ ಮೂಲಕ ತನ್ನ ಕಲಿಕೆಯನ್ನು ಪ್ರದರ್ಶಿಸುವುದು, ಚಿತ್ರಕಲೆಯ ಮೂಲಕ ವಿಷಯ ವಸ್ತುವನ್ನು ಪ್ರಚುರಪಡಿಸುವುದು. ಹೀಗೆಯೇ 3 ರಿಂದ 4 ಕ್ಲಬ್‌ನಲ್ಲಿ ತಾನು ಗಳಿಸಿರುವ ಜ್ಞಾನವನ್ನು ಬಳಸಿಕೊಂಡು ಪ್ರಸ್ತುತ ಪಡಿಸುವುದು ಆಲ್‌ರೌಂಡರ್ ತಂಡದ ಮಕ್ಕಳ ಜವಾಬ್ದಾರಿಯಾಗಿರುತ್ತದೆ.

ಕಳೆದ ಜೂನ್‌ನಿಂದ ಆಲ್‌ರೌಂಡರ್ಸ್ ತಂಡದ ಪಠ್ಯಕ್ರಮ ಟೈಪ್ಸ್ ಆಪ್ ಡಿಸ್ಟ್ರಿಬಿಷನ್, ಹೌ ಟು ಬಿಲ್ಡ್ ಎ ಕಾಂಪೋಸ್, ವರ್ಲ್ಡ್ ಆಪ್ ಐಡಿಯಾಸ್, ಪಿರಿಯೊಡಿಕ್ ಟೇಬಲ್, ಇಂಪ್ಯಾಕ್ಟ್ ಆಫ್ ಕೊರೊನ, ಫುಡ್ ಸೈನ್ಸ್, ವರ್ಲ್ಡ್ ಆಪ್ ಮ್ಯಾಪ್ಸ್ ಮತ್ತು ದ ಸೈನ್ಸ್ ಆಪ್ ಮ್ಯೂಸಿಕ್ ಪಾಠಗಳನ್ನು ಆನ್‌ಲೈನ್ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದೆ.

## ಹೊನ್ನಶೆಟ್ಟರಹುಂಡಿ ಶಾಲೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶಿವಮೂರ್ತಿರವರಿಂದ ಕೆಫ್ ಸೆನ್‌ಸೋರಿಯಂ ಉದ್ಘಾಟನೆ



## ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೆಫೆ ಸೆನ್‌ಸೋರಿಯಮ್



ಕೋವಿಡ್‌ನಿಂದಾಗಿ ಮಕ್ಕಳ ಕಲಿಕೆ ಕುಂಠಿತಗೊಳ್ಳದಂತೆ ಮಾಡುವ ದೃಷ್ಟಿಕೋನದಿಂದಾಗಿ ಆಶ್ರಯ ಸಂಸ್ಥೆಯು ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿನೂತನ ಶೈಕ್ಷಣಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಯಿತು. ಇತ್ತೀಚಿನ ದಿನಗಳಲ್ಲಿ ಮಕ್ಕಳಿಗೆ ತಂತ್ರಜ್ಞಾನದ ಅರಿವು ಅಗತ್ಯವನಿಸುತ್ತಿದೆ.


ಗುಂಡ್ಲುಪೇಟೆ ತಾಲ್ಲೂಕಿನ 5 ಶಾಲೆಗಳಲ್ಲಿ ಕೆಫೆ ಸೆನ್‌ಸೋರಿಯಮ್ ಕಾರ್ಯಕ್ರಮವನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶಿವಮೂರ್ತಿರವರು ಉದ್ಘಾಟಿಸಿದರು.

ಕಂಪ್ಯೂಟರ್ ಜ್ಞಾನವು ಆಧುನಿಕ ಪ್ರಪಂಚಕ್ಕೆ ಹೆಚ್ಚು ಅನಿವಾರ್ಯವಾಗಿದೆ. ಹಾಗಾಗಿ ಆಸಕ್ತಿದಾಯಕ ಕಲಿಕೆಗೆ ಮಕ್ಕಳನ್ನು ತೊಡಗಿಸುವ ಸಲುವಾಗಿ ಸಂಸ್ಥೆಯು ಟ್ಯಾಬ್‌ಗಳನ್ನು ಶಾಲೆಗಳಿಗೆ ಒದಗಿಸಿ ಶಿಕ್ಷಣ ನೀಡಲು ಪ್ರಾರಂಭಿಸಿದೆ ಸಂಸ್ಥೆಯು ಕೇವಲ ಒಂದು ತಾಲ್ಲೂಕಿಗೆ ಸೀಮಿತಗೊಳಿಸಿದ್ದ ಕಾರ್ಯಕ್ರಮಗಳನ್ನು ಗುಂಡ್ಲುಪೇಟೆ ತಾಲ್ಲೂಕಿಗೂ ವಿಸ್ತರಿಸಿದೆ. 2021–22ನೇ ಸಾಲಿನಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ 5 ಶಾಲೆಗಳಲ್ಲಿ ವಿಜ್ಞಾನ ಸಂಘ, ಕಂಪ್ಯೂಟರ್ ಸಂಘ, ಬುಕ್ ಆಫ್ ದ ಮಂಥ್, ಎಂ.ಎಲ್.ಎಲ್., ಸಂಘ, ಚಿತ್ರಕಲೆ ಸಂಘಗಳನ್ನು ಸ್ಥಾಪಿಸಿ ಆಶ್ರಯ ಸಂಸ್ಥೆಯು ತನ್ನ ಜ್ಞಾನಧಾರೆಯ ಚಿಲುಮೆಯನ್ನು ವಿಸ್ತರಿಸಿಕೊಂಡಿದೆ. ಪ್ರತಿಭಾನ್ವಿತ ವಿದ್ಯಾರ್ಥಿಗಳು ಗುರ್ತಿಸಿ ಪೋಷಿಸುವ ಕಾರ್ಯವನ್ನು ಆಶ್ರಯ ಸಂಸ್ಥೆಯು ನಡೆಸುತ್ತಿದೆ.

## ಎಂ.ಎಲ್.ಎಲ್. ಮೈಂಡ್ ಮ್ಯಾಪ್

'ಕಥೆ ಆಧಾರಿತ ಚಟುವಟಿಕೆ' ಬೋಧನೆಯನ್ನು 'ಮೈಂಡ್ ಮ್ಯಾಪ್' ಮೂಲಕ ವಿದ್ಯಾರ್ಥಿ ಕೇಂದ್ರಿತ ಕಲಿಕೆ ಉಂಟು ಮಾಡುವ ಉದ್ದೇಶದಿಂದ ಗುಂಡ್ಲುಪೇಟೆ ತಾಲ್ಲೂಕಿನ 9 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. 'ಕನಿಷ್ಠ ಕಲಿಕಾ ಮಟ್ಟ' ಉದ್ದೇಶ ಆಧಾರಿತ ಚಟುವಟಿಕೆಗಳನ್ನು ಈ ಶಾಲೆಗಳಲ್ಲಿ ಅನುಷ್ಠಾನಗೊಳಿಸಿ ಎಂ.ಎಲ್.ಎಲ್. ಕ್ಲಬ್‌ನ ಮಕ್ಕಳು ಚಟುವಟಿಕೆಗಳನ್ನು ಮಾಡುತ್ತಾರೆ. ನಂತರ ತಾವು ಕಲಿತ ಪರಿಕಲ್ಪನೆಗಳಿಗೆ ಮೈಂಡ್ ಮ್ಯಾಪ್ ರಚಿಸಿಸುತ್ತಾರೆ. ಇದರಿಂದ ಮಕ್ಕಳಿಗೆ ಪರಿಕಲ್ಪನೆಗಳನ್ನು ವಿಸ್ತರಿಸುವುದು, ವರ್ಗೀಕರಿಸುವುದು, ಸಾಮಾನ್ಯೀಕರಿಸುವ ಕೌಶಲ ಬೆಳೆಯುತ್ತಿದೆ.




ಅಣ್ಣೂರಿಕೇರಿ ಶಾಲಾ ಮಕ್ಕಳು ಎಂ.ಎಲ್.ಎಲ್. ಚಟುವಟಿಕೆ ಕೈಗೊಂಡಿರುವುದು.
ಚಿತ್ರ–2 ಮೈಂಡ್ ಮ್ಯಾಪ್

## ಕಂಪ್ಯೂಟರ್‌ನ ತಾತ್ವಿಕ ತರಗತಿಯ ನಿರ್ವಹಣೆ: ಮಲ್ಲು

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಒಟ್ಟು 9 ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಶಾಲೆಗಳಿಗೆ ತಾಲ್ಲೂಕು ಯೋಜನಾ ಸಂಯೋಜಕರಾದ ಮಲ್ಲುರವರು ಭೇಟಿ ನೀಡಿ ಮಕ್ಕಳು ಟ್ಯಾಬ್ ಉಪಯೋಗಿಸಿ ಕಂಪ್ಯೂಟರ್ ಪ್ರಾಯೋಗಿಕ ಬೋಧನಾ ತರಗತಿಯನ್ನು ವೆಬ್‌ಸೈಟ್‌ನಲ್ಲಿ ನೋಡುತ್ತಾರೆ. ತದನಂತರ ಲ್ಯಾಪ್ ಟಾಪ್ ಉಪಯೋಗಿಸಿಕೊಂಡು ಪ್ರಾಯೋಗಿಕವಾಗಿ ಕಂಪ್ಯೂಟರ್ ಜ್ಞಾನವನ್ನು ಗಳಿಸುತ್ತಿದ್ದಾರೆ. ಗುಂಡ್ಲುಪೇಟೆ ಟೌನ್ ಶಾಲೆಯ ಭಾವಚಿತ್ರ







## ಅಮೆಡಿಯಸ್ ಕಂಪನಿಯಿಂದ ಲ್ಯಾಪ್‌ಟಾಪ್ ವಿತರಣೆ




2022–23ನೇ ಶೈಕ್ಷಣಿಕ ವರ್ಷದಿಂದ ಕೆಫೆ ಸೆನ್‌ಸೋರಿಯಮ್ ಶಾಲೆಗಳಲ್ಲಿರುವ ಕಂಪ್ಯೂಟರ್ ಕ್ಲಬ್‌ನ ಮಕ್ಕಳು ಲ್ಯಾಪ್‌ಟಾಪ್ ಮೂಲಕ ಪ್ರಾಯೋಗಿಕವಾಗಿ ಕಂಪ್ಯೂಟರ್ ಬಳಸಲು ಬೆಂಗಳೂರಿನ ಅಮೆಡಿಯಸ್ ಕಂಪನಿಯು ಲ್ಯಾಪ್‌ಟಾಪ್‌ಗಳನ್ನು ವಿತರಿಸಿತು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಶಿವಮೂರ್ತಿರವರು, ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕ ವೃಂದ ಉಪಸ್ಥಿತರಿದ್ದರು.

## ಎಲ್ಲಾ ಕ್ಲಬ್‌ಗಳನ್ನು ಶಾಲೆಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಬೇಕು.



ಗುಂಡ್ಲುಪೇಟೆ ತಾಲ್ಲೂಕಿಗೆ ಆಶ್ರಯ ಸಂಸ್ಥೆಯ ಅಧ್ಯಕ್ಷರಾದ ವಾಸುಕಿ ಸುಬ್ಬರಾವ್ ರವರು ಭೇಟಿ ನೀಡಿ ನೇನೇಕಟ್ಟೆ ಶಾಲೆಯ ಮುಖ್ಯಶಿಕ್ಷಕರಾದ ಬಿ.ಆರ್. ಪ್ರಭುಸ್ವಾಮಿ ರವರೊಂದಿಗೆ ಚರ್ಚಿಸಿದರು. ಸಂಸ್ಥೆಯ ಎಲ್ಲಾ ವಿನೂತನ ಚಟುವಟಿಕೆಗೆ ಸಹಕಾರ ಕೋರಿದರು. ಮಕ್ಕಳು ಸಮರ್ಪಕವಾಗಿ ಟ್ಯಾಪ್ ಉಪಯೋಗಿಸಿಕೊಂಡು ಆನ್‌ಲೈನ್ ಮೂಲಕ ವೆಬ್‌ಸೈಟ್‌ನಲ್ಲಿರುವ ಪಾಠಗಳನ್ನು ವೀಕ್ಷಿಸಿ ಕಲಿಕಾ ಪ್ರಗತಿಯನ್ನು ಉತ್ತಮಪಡಿಸಿಕೊಳ್ಳುವಂತೆ ತಿಳಿಸಿದರು. ಪ್ರತಿ ಕ್ಲಬ್‌ನಲ್ಲಿರುವ ಪಾಠಗಳನ್ನು ಆಯಾಯ ತಿಂಗಳಿನಲ್ಲಿಯೇ ವೀಕ್ಷಣೆ ಮಾಡಿ ಪೂರ್ಣಗೊಳಿಸಬೇಕು. ನಂತರ ತಮ್ಮ ಕಲಿಕೆಯನ್ನು ಪೋಟೋ ಅಥವಾ ವೀಡಿಯೋಗಳನ್ನು ತಮ್ಮ ಸ್ಟೂಡೆಂಟ್ ಐಡಿ ಮೂಲಕ ವೆಬ್‌ಸೈಟ್‌ಗೆ ಅಪ್‌ಲೋಡಬೇಕೆಂದು ತಿಳಿಸಿದರು.

## ಚರ್ಚೆಯಲ್ಲಿ ತೊಡಗಿರುವ ಬುಕ್ ಕ್ಲಬ್‌ನ ಮಕ್ಕಳು



ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಂಡ್ಲುಪೇಟೆ ಶಾಲೆಯ ಮಕ್ಕಳು ಚರ್ಚಿಸುತ್ತಿರುವುದು



**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಣ್ಣೂರುಕೇರಿ. ಎಂ.ಎಂ.ಎಲ್. ಚಟುವಟಿಕೆ**

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬುಕ್ ಆಪ್ ದ ಮಂಥ್ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದೆ. ಶಿಕ್ಷಕರಿಲ್ಲದೆ ಕೇವಲ ವೆಬ್‌ಸೈಟ್‌ನಲ್ಲಿರುವ ಪಾಠಗಳನ್ನು ನೋಡಿ ತಮ್ಮ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ನಿರೀಕ್ಷಿತ ಪಠ್ಯವನ್ನು ನಿಗದಿ ಕಾಲಾವಧಿಯಲ್ಲಿ ಪೂರ್ಣಗೊಳಿಸುತ್ತಾ ನಾಟಕಗಳನ್ನು ಮಾಡುತ್ತಿದ್ದಾರೆ. ಈ ಬಾರಿ ವಿಶೇಷವಾಗಿ ಶೇಕ್ಸ್‌ಪಿಯರ್ ನಾಟಕಗಳಲ್ಲಿ ಆಯ್ದ ಕೆಲವು ತುಣುಕುಗಳನ್ನು ಮಕ್ಕಳಿಗೆ ಕಿರು ಹೊತ್ತಿಗೆ ರೂಪದಲ್ಲಿ ನೀಡಲಾಗಿತ್ತು. ಗುಂಪು ಚರ್ಚೆ ಹಾಗೂ ವಾಕ್‌ಚಾತುರ್ಯ ಉತ್ತೇಜಿಸುವ ಈ ಕಾರ್ಯಕ್ರಮವು ಸಾಕಷ್ಟು ಮಕ್ಕಳಿಗೆ ಆಸಕ್ತಿ ಹೆಚ್ಚಿಸಿದೆ. ವೈಯಕ್ತಿಕ ಅಭಿಪ್ರಾಯಕ್ಕೆ ಮನ್ನಣೆ ನೀಡುತ್ತಿದೆ. ವಿಶ್ಲೇಷಣಾತ್ಮಕ ಚಿಂತನೆಗೆ, ತಾರ್ಕಿಕ ಮನೋಸಾಮರ್ಥ್ಯವನ್ನು ಉನ್ನತಿಗೊಳಿಸುವ ಕಾರ್ಯಕ್ರಮವು ಇದಾಗಿದ್ದು, ಕಳೆದ ವರ್ಷದಂತೆ ಈ ಬಾರಿ ಒಂಭತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 'ಬುಕ್ ಆಫ್ ದ ಮಂಥ್' ಕಾರ್ಯಕ್ರಮವನ್ನು ಆಶ್ರಯ ಸಂಸ್ಥೆಯು ಅನುಷ್ಠಾನಗೊಳಿಸಿದೆ. ಮಕ್ಕಳು ಹೆಚ್ಚು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಲು ಇದು ಸಹಾಯಕವಾಗುತ್ತಿದೆ. ಕಥೆ, ಕಾದಂಬರಿಯಂತಹ ಅನೇಕ ಕೃತಿಗಳನ್ನು ಹೆಚ್ಚು ಹೆಚ್ಚು ಅಭ್ಯಸಿಸಲು ಇದು ಅನುಕೂಲಕರವಾಗಿದೆ. ಈ ಕಾರ್ಯಕ್ರಮದಲ್ಲಿ ತೊಡಗಿಕೊಳ್ಳುವುದರ ಮೂಲಕ ಮಕ್ಕಳು ತಮ್ಮ ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಲು ಇದು ಸೂಕ್ತ ವೇದಿಕೆಯಾಗಿದೆ.


## ಕೆಫೆ ಸೆನ್‌ಸೋರಿಯಮ್ ಶಾಲಾ ಮಕ್ಕಳ ಚಿತ್ರಗಳು

ಗುಂಡ್ಲುಪೇಟೆ ತಾಲ್ಲೂಕಿನ ಆಯ್ದ 9 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಚಿತ್ರಕಲಾ ಅಭಿರುಚಿ ಬೆಳೆಸುವ ಉದ್ದೇಶದಿಂದ ಸಂಸ್ಥೆಯು ಆರ್ಟ್ ಕ್ಲಬ್‌ನ್ನು ಪ್ರಾರಂಭಿಸಿದೆ. ಆನ್‌ಲೈನ್‌ನಲ್ಲಿ ಅಳವಡಿಸಿರುವ ಚಿತ್ರ ಬಿಡಿಸುವ ಬೋಧನಾ ಪಾಠಗಳನ್ನು ಮಕ್ಕಳು ವೀಕ್ಷಿಸಿ ಸ್ವತಃ ನೋಡಿ ಬರುತ್ತಿದ್ದಾರೆ. ಈ ತಾಲ್ಲೂಕಿನ ಸಂಸ್ಥೆಯ ಕಾರ್ಯಕ್ರಮವನ್ನು ಪ್ರಾರಂಭಿಸಿ 2 ವರ್ಷವಾಗಿದೆ. ಕಳೆದ ವರ್ಷ ಆರ್ಟ್ ಕ್ಲಬ್‌ನಲ್ಲಿದ್ದ ಹಲವು ವಿದ್ಯಾರ್ಥಿಗಳು ಉತ್ತಮವಾಗಿ ಚಿತ್ರ ಬಿಡಿಸುತ್ತಿದ್ದಾರೆ.

**ಗುಂಡ್ಲುಪೇಟೆ ತಾಲ್ಲೂಕಿನ ಸರ್ಕಾರಿ ಶಾಲಾ ಮಕ್ಕಳು ಬರೆದಿರುವ ಚಿತ್ರಗಳು**









## ವೈಜ್ಞಾನಿಕ ಜ್ಞಾನದತ್ತ ಆಶ್ರಯ ಚಿತ್ತ

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸೈನ್ಸ್ ಕ್ಲಬ್ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯುತ್ತಿದೆ. ಆನ್‌ಲೈನ್ ಶಿಕ್ಷಣವು ಸ್ವ–ಕಲಿಕೆಗೆ ಹೆಚ್ಚು ಒತ್ತು ನೀಡುತ್ತಿದೆ. ವಿದ್ಯಾರ್ಥಿಗಳು ತಾವು ನೋಡಿದ ವೀಡಿಯೋ ಪಾಠಗಳನ್ನು ಸ್ವ ಮನನ ಮಾಡಿಕೊಂಡು ತನ್ನ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.



**ಸ.ಹಿ.ಪ್ರಾ.ಶಾಲೆ,ಬನ್ನಿತಾಳನಪುರ ಸೈನ್ಸ್ ಕ್ಲಬ್ ಮಕ್ಕಳು**

ವೆಬ್‌ಸೈಟ್‌ನಲ್ಲಿ ಅಳವಡಿಸಿರುವ ವಿಜ್ಞಾನ ಪಾಠಗಳನ್ನು ಮಕ್ಕಳು ಟ್ಯಾಬ್‌ಮೂಲಕ ವೀಕ್ಷಿಸಿ ಸ್ವತಃ ಪ್ರಯೋಗ ಕೈಗೊಂಡು 3 ರಿಂದ 5 ನಿಮಿಷಗಳ ವೀಡಿಯೋವನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುತ್ತಾರೆ. ಈ ವಿಜ್ಞಾನ ಚಟುವಟಿಕೆಯನ್ನು ಮಾಡುವ ವಿಧಾನ ಮತ್ತು ಫಲಿತಾಂಶವನ್ನು ಸೈನ್ಸ್ ರೆಕಾರ್ಡ್‌ನಲ್ಲಿ ಬರೆಯುತ್ತಿದ್ದಾರೆ.



## ಬೇರೆ ಬೇರೆ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು

ಕೆಫೆ ಸೆನ್‌ಸೋರಿಯಮ್‌ನ ಪ್ರತಿ ಶಾಲೆಯ ಎಲ್ಲಾ ಕ್ಲಬ್‌ನಲ್ಲಿ ಭಾಗವಹಿಸುತ್ತಿರುವ ಮಕ್ಕಳು ತಮ್ಮ ಜ್ಞಾನ ಬತ್ತಳಿಕೆಯನ್ನು ಹೆಚ್ಚಿಸಿಕೊಳ್ಳಲು ಇಲಾಖೆಯಿಂದ ಅಥವಾ ಸರ್ಕಾರೇತರ ಸಂಸ್ಥೆಗಳು ನಡೆಸುವ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ನಡೆಯುವ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ನಾಟಕ ಸ್ಪರ್ಧೆ ಹಾಗೂ ಚಿತ್ರಕಲಾ ಸ್ಪರ್ಧೆಗಳಲ್ಲಿ ತಾವುಗಳು ತಪ್ಪದೆ ಭಾಗವಹಿಸಬೇಕು. ಇಂತಹ ಸ್ಪರ್ಧೆಗಳಲ್ಲಿ ಭಾಗವಹಿಸುವುದರಿಂದ ಸ್ಪರ್ಧಾ ಮನೋಭಾವನೆ ಹಿಮ್ಮಡಿಗೊಳಿಸಬಹುದು. ಆಗ ನಿಮ್ಮ ಈ ಕ್ಲಬ್‌ನಲ್ಲಿ ಕಲಿತ ಜ್ಞಾನವು ಉಪಯುಕ್ತವಾಗುತ್ತದೆ.

## ಕೆಫೆ ಸೆನ್‌ಸೋರಿಯಮ್ 'ಬುಕ್ ಆಪ್ ದ ಮಂಥ್' ಮಕ್ಕಳ ಓಥೆಲೊ ನಾಟಕ ಪ್ರದರ್ಶನ

ಬುಕ್ ಆಪ್ ದ ಮಂಥ್ ಮಕ್ಕಳಿಗೆ ನಾಟಕಾಭಿರುಚಿ ಬೆಳೆಸುವ ಉದ್ದೇಶದಿಂದ ಡಿಸೆಂಬರ್ ತಿಂಗಳಿನಲ್ಲಿ ಶಾಲೆಗಳಲ್ಲಿಯೇ ಮಕ್ಕಳ ತಂಡ ರಚಿಸಿಕೊಂಡು ನಾಟಕ ಪ್ರದರ್ಶನ ಮಾಡುವಂತೆ ತಿಳಿಸಲಾಗಿತ್ತು. ಅದರಂತೆ ಪ್ರತಿ ಶಾಲೆಯಲ್ಲಿ ಮಕ್ಕಳು ತಮ್ಮ ಕಲಾಭಿರುಚಿಯನ್ನು ಅಭಿವ್ಯಕ್ತಗೊಳಿಸಿದರು. ಶೇಕ್ಸ್‌ಸ್ಪಿಯರ್‌ರವರ ಓಥೆಲೊ ನಾಟಕವನ್ನು ಸ್ಪರ್ಧೆಗೆ ನೀಡಲಾಗಿತ್ತು. ಅಂತಯೇ ಮಕ್ಕಳು ವಿವಿಧ ಪಾತ್ರಗಳಿಗೆ ತಕ್ಕಂತೆ ವೇಷಭೂಷಣ ಧರಿಸಿ ಶಾಲಾ ಹಂತದಲ್ಲಿ ನಾಟಕವನ್ನು ಪ್ರದರ್ಶಿಸಿದರು.



**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಣ್ಣೂರಿಕೇರಿ**



**ಹಿರಿಯ ಪ್ರಾಥಮಿಕ ಶಾಲೆ, ಗುಂಡ್ಲುಪೇಟೆ ಟೌನ್**



**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,ಶಿಂಡನಪುರ**

# » ಮಕ್ಕಳ ಅರಮನೆ «

ಪ್ರತಿಭೆ ಅನಾವರಣಗೊಳಿಸಲು

## ವಿದ್ಯಾರ್ಥಿ ಸ್ವರಚಿತ ಕಥೆ

**ಕಥೆಯ ಹೆಸರು : ಜಾತಿ ಬೇಧ**

**ಕಥೆ ಬರೆದವರು: ಮನೋಜ್**

ಯಾದಗಿರಿ ಎಂಬ ಊರಿನಲ್ಲಿ ಒಂದು ಧರ್ಮವಿತ್ತು. ಕೀಳು ಜಾತಿ ಮತ್ತು ಮೇಲು ಜಾತಿ. ಮೇಲು ಜಾತಿಯವರು ಕೀಳು ಜಾತಿಯವರನ್ನು ತುಂಬಾ ದ್ವೇಷಿಸುತ್ತಿದ್ದರು. ಕೀಳುಜಾತಿಯವರನ್ನು ಮೇಲು ಜಾತಿಯವರು ಏನನ್ನೂ ಮಾಡಲು ಮತ್ತು ಮುಟ್ಟಲು ಬಿಡುತ್ತಿರಲಿಲ್ಲ. ಕೀಳೂ ಜಾತಿಯವರು ಏನಾದರೂ ಅವರು ಇದ್ದ ಜಾಗಕ್ಕೆ ಹೋದರೆ ಅವರಿಗೆ ಶಿಕ್ಷೆಯನ್ನು ನೀಡುತ್ತಿದ್ದರು. ಹಾಗೆ ಒಂದು ದಿನ ಕೀಳು ಜಾತಿಯ ಮಕ್ಕಳು ಆಟ ಆಡುತ್ತಾ ಮೇಲುಜಾತಿಯವರು ವಾಸಿಸುವ ಜಾಗಕ್ಕೆ ಆಕಸ್ಮಿಕವಾಗಿ ಹೋಗುತ್ತಾರೆ. ಅಲ್ಲಿಂದ ಮೇಲು ಜಾತಿಯವರ ಮಕ್ಕಳು ಕೀಳುಜಾತಿಯವರ ಮಕ್ಕಳ ಜೊತೆ ಆಟವಾಡಲು ಶುರು ಮಾಡಿದರು. ಇದನ್ನೆಲ್ಲಾ ನೋಡಿದ ಒಬ್ಬ ಮಹಿಳೆ ಜೋರಾಗಿ ಎಲ್ಲರನ್ನೂ ಕರೆಯುತ್ತಾಳೆ. ಆಘ ಎಲ್ಲರೂ ಅಲ್ಲಿಗೆ ಬರುತ್ತಾರೆ. ಮಕ್ಕಳನ್ನು ಕಂಡ ಮೇಲುಜಾತಿ ಜನ ಆ ಮಕ್ಕಳನ್ನು ಚೆನ್ನಾಗಿ ಹೊಡೆಯುತ್ತಾರೆ. ಆ ಮಹಿಳೆ ಮೇಲುಜಾತಿ ಮಕ್ಕಳಿಗೂ ಚೆನ್ನಾಗಿ ಹೊಡೆಯುತ್ತಾಳೆ. ಮೇಲುಜಾತಿ ಮಕ್ಕಳನ್ನು ತಣ್ಣೀರಿನಲ್ಲಿ ಸ್ನಾನಮಾಡಿಸುತ್ತಾಳೆ. ಮಕ್ಕಳ ಧರಿಸಿದ್ದ ಬಟ್ಟೆಯನ್ನು ಸುಡುತ್ತಾಳೆ. ಆ ಕೀಳುಜಾತಿಯ ಮಕ್ಕಳನ್ನು ಮುಟ್ಟಿಸಿಕೊಳ್ಳು ಅಸಹ್ಯ ಎಂದುಕೊಂಡು ಆ ಮಕ್ಕಳನ್ನು ಮೇಲುಜಾತಿಯವರು ಕಡ್ಡಿಯಿಂದ ಹೊಡೆಯುತ್ತಾರೆ. ಆ ಮಕ್ಕಳಿಗೆ ತುಂಬಾ ರಕ್ತ ಸುರಿಯುತ್ತದೆ. ಅಲ್ಲಿದ್ದ ಮಹಿಳೆಯರಿಗೆ ಕರುಳು ಚುರುಕ್ ಅನಿಸುತ್ತದೆ. ಮಹಿಳೆಯರು ಹೊಡೆಯುವುದನ್ನು ನಿಲ್ಲಿಸಿ ನಿಲ್ಲಿಸಿ ಎನ್ನುತ್ತಾರೆ. ಆದರೂ ಅವರು ಹೊಡೆಯುವುದನ್ನು ನಿಲ್ಲಿಸುವುದಿಲ್ಲ. ಅಲ್ಲಿಂದ ಒಬ್ಬ ಕೀಳು ಜಾತಿಯ ಹುಡುಗ ತಪ್ಪಿಸಿಕೊಳ್ಳುತ್ತಾನೆ. ಆತನ ರಕ್ತ ಸುರಿಯುವುದನ್ನು ತೋರಿಸಿ ನಡೆದ ಘಟನೆಯನ್ನು ತಮ್ಮ ಜನರಿಗೆ ವಿವರಿಸುತ್ತಾನೆ. ತನ್ನ ಇತರ ಸ್ನೇಹಿತರಿಗೂ ಹೊಡೆಯುತ್ತಿದ್ದಾರೆಂದು ತಿಳಿಸುತ್ತಾನೆ. ಅತಿಯಾದ ರಕ್ತ ಸ್ರಾವವಾದ ಕಾರಣ ಆ ಮಗು ಅಲ್ಲಿಯೇ ಕುಸಿದುಬಿದ್ದು ಪ್ರಾಣಬಿಡುತ್ತದೆ. ಆಗ ಅವರ ಮಗನನ್ನು ನೋಡಿ ತಾಯಿಗೆ ತುಂಬಾ ದುಃಖವಾಯಿತು. ತಕ್ಷಣ ಕೀಳುಜಾತಿಯ ಜನರು ಮೇಲು ಜಾತಿಯವರ ವಾಸವಾಗಿರುವ ಮನೆ ಕಡೆಗೆ ಹೊರಡುತ್ತಾರೆ. ಮೇಲುಜಾತಿಯವರ ಮನೆಗೆ ಒಂದು ಹೆಜ್ಜೆ ಇಡುವಷ್ಟರಲ್ಲಿ ಮೇಲು ಜಾತಿಯವರು ಬಂದು ಇವರನ್ನು ತಡೆಟ್ಟುತ್ತಾರೆ. ಅವರ ಮಕ್ಕಳನ್ನು ನೋಡಿ ಕರಳು ಕಿತ್ತುಬರುತ್ತದೆ. ಮಕ್ಕಳ ಸ್ಥಿತಿಯನ್ನು ನೋಡಿ ತಮ್ಮ ಮಕ್ಕಳನ್ನು ಬಿಟ್ಟುಬಿಡಿ ಎಂದು ಬೇಡಿಕೊಂಡರು. ಈ ಮಕ್ಕಳಿಗೆ ನಡೆಯಲು ಸಹ ಕಷ್ಟವಾಗುತ್ತಿದ್ದ ಕಾರಣ ಮಕ್ಕಳನ್ನು ಹೊತ್ತುಕೊಂಡು ಹೊರಡುತ್ತಾರೆ.

ಒಂದು ದಿನ ಮೇಲುಜಾತಿಯವರು ಒಂದು ನಿರ್ಧಾರ ಮಾಡಿದರು. ಅದು ಯುದ್ಧ ರೂಪದಲ್ಲಿ ನಡೆಯಬೇಕೆಂದು ನಿರ್ಧರಿಸುತ್ತಾರೆ. ಅವರು ಸೋತರೆ ಇವರು ಹೇಳಿದಂತೆ ಕೇಳಬೇಕು. ಇವರು ಸೋತರೆ ಅವರು ಹೇಳಿದಂತೆ ಮಾಡಬೇಕೆಂದು ಒಪ್ಪಿಕೊಳ್ಳುತ್ತಾರೆ. ಯುದ್ಧ ನಡೆದು ಅನೇಕ ಮೇಲುಜಾತಿಯ ಜನರು ಮೃತಪಡುತ್ತಾರೆ. ಯುದ್ಧದಲ್ಲಿ ಕೀಳುಜಾತಿವರು ಗೆಲ್ಲುತ್ತಾರೆ. ನಾವು ಹೇಳಿದಂತೆ ನೀವು ಕೇಳಬೇಕೆಂದು ಮೇಲುಜಾತಿಯವರಿಗೆ ತಿಳಿಸುತ್ತಾರೆ. ನೀವು ನಮ್ಮ ಸಮಾನವಾಗಿ ನೋಡಬೇಕು. ಹಾಗೆಯೇ ನಡೆದುಕೊಳ್ಳುವಂತೆ ಷರತ್ತು ವಿಧಿಸಿದ್ದಕ್ಕೆ ಮೇಲುಜಾತಿಯವರು ಒಪ್ಪಿಕೊಳ್ಳುತ್ತಾರೆ. ಅಂತಿಮವಾಗಿ ಎರಡೂ ಜಾತಿಯ ಜನರು ಯಾವುದೇ ಜಾತಿಬೇದವಿಲ್ಲದೆ ಒಟ್ಟಿಗೆ ಬದುಕುತ್ತಾರೆ.

**ನೀತಿ:** ಜಾತಿ ಬೇದ ಮಾಡದೆ ಎಲ್ಲರನ್ನುಸಮಾನತೆಯಿಂದ ಕಾಣಬೇಕು.

## ಈ ಸುಳಿವು ಉಪಯೋಗಿಸಿ ಕಥೆ ರಚಿಸಿ

**ಕಥೆಯ ಭಾಗ** : ದೇವಸ್ಥಾನ

**ವಿಷಯ** : ವರ

**ಸನ್ನಿವೇಶ** : ದೈವ ಭಕ್ತಿಯನ್ನು ಹೊಂದಿರುವ ಬಡ ಕುಟುಂಬ. ಮಗನಿಗೆ ಒಂದು ಸರ್ಕಾರಿ ನೌಕರಿ ಸಿಗಬೇಕೆಂದು ಪ್ರಾರ್ಥನೆ. ಶ್ರೀಮಂತ ಕುಟುಂಬದ ಮಗನು ಬುದ್ಧಿವಂತನಲ್ಲ. ಅದಕ್ಕಾಗಿ ಅವನು ದೇವರಿಗೆ ಹೋಮ ಮಾಡಿಸಿ ಪ್ರಾರ್ಥನೆ ಮಾಡುತ್ತಾನೆ.

**ಕಥೆಯ ತಿರುವು** : ದೇವರು ಪ್ರತ್ಯಕ್ಷವಾಗಿ ಬಡ ವಿದ್ಯಾರ್ಥಿಗೆ ವರ ನೀಡುತ್ತದೆ.

**ಮುಂದೆ ಏನಾಗುತ್ತದೆ : ?**

**(ಈ ಮೇಲಿನ ಸುಳಿವು ಬಳಸಿ ಒಂದು ಕಥೆ ಬರೆದು ಸಲ್ಲಿಸಿ)**

### ಪ್ರಬಂಧ ಸ್ಪರ್ಧೆ

**ಆಧುನಿಕ ಜೀವನಕ್ಕೆ ಕಂಪ್ಯೂಟರ್ ಜ್ಞಾನದ ಅವಶ್ಯಕತೆ.**

### ಪ್ರಬಂಧ ಸ್ಪರ್ಧೆ

**ಪುರು ತನ್ನ ಯವ್ವನವನ್ನು ತಂದೆಗೆ ನೀಡಿದ್ದು ಸರಿಯೇ ತಪ್ಪೇ?**


**ಶಿಕ್ಷಕರ ಸಮ್ಮುಖದಲ್ಲಿ ಪ್ರಬಂಧ ಮತ್ತು ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ವಿಜೇತ ಮಕ್ಕಳಿಗೆ ಬಹುಮಾನ ನೀಡಲಾಗುವುದು.**

## ನೇನೇಕಟ್ಟೆ ಶಾಲೆ ವಿದ್ಯಾರ್ಥಿ ಪ್ರವೀಣ್‌ನ ಬಣ್ಣದ ಚಿತ್ರಗಳು



ಸುಪ್ರಿತ, ಪಡಗೂರು





## ಅನಿಸಿಕೆ

'ನಹಿಜ್ಞಾನೇನ ಸದೃಶ್ಯಂ' ಎಂಬಂತೆ ಒಮ್ಮೆ ಜ್ಞಾನವಂತರಾದರೆ ಅದು ನಮ್ಮ ಜೀವನದುದ್ದಕ್ಕೂ ಇರುವ ಸಂಪತ್ತು. ಅಂತಹ ಜ್ಞಾನವಂತರಾದಾಗ ಜೀವನ ಪರ್ಯಂತ ಗೌರವಿಸಲ್ಪಡುತ್ತೇವೆ. ಒಬ್ಬರಾಜನಿಗೆ ಅವನ ಸಾಮ್ರಾಜ್ಯದಲ್ಲಿ ಗೌರವ ದೊರೆತರೆ ಪಂಡಿತನಿಗೆ ಜಗತ್ತಿನೆಲ್ಲೆಡೆ ಗೌರವ ದೊರೆಯುತ್ತದೆ. ನಮ್ಮ ವಿದ್ಯಾರ್ಥಿಗಳು ಜ್ಞಾನವಂತರಾಗಿ ಎಲ್ಲೆಡೆ ಗೌರವ ಪಡೆಯುವಂತವರಾಗಬೇಕು ಎಂಬುವುದೇ ಅರಿವಿನ ಅರಮನೆಯ ಆಶಯವಾಗಿದೆ.

ಆಶ್ರಯ ಫೌಂಡೇಶನ್ 'Cafe Sensorium' ಹೆಸರಿನ ಕಾರ್ಯಕ್ರಮದಡಿಯಲ್ಲಿ ಗುಂಡ್ಲುಪೇಟೆ ತಾಲ್ಲೂಕಿನ 9 ಶಾಲೆಗಳಲ್ಲಿ ನಡೆಸಲ್ಪಡುತ್ತಿರುವ ಚಿತ್ರಕಲಾ ಸಂಘ, ವಿಜ್ಞಾನ ಸಂಘ, ಬುಕ್ ಸಂಘ, ವಿಜ್ಞಾನ, ಪರಿಹಾರ ಬೋಧನೆ ಮತ್ತು ಕಂಪ್ಯೂಟರ್ ಸಂಘಗಳ ಮೂಲಕ ಮಕ್ಕಳಿಗೆ ಮಹೋನ್ನತರವಾದ ಜ್ಞಾನವನ್ನು ನೀಡುತ್ತಿದೆ.

**ಮಲ್ಲು. ಗುಂಡ್ಲುಪೇಟೆ ಯೋಜನಾ ಸಂಯೋಜಕರು**

ಗ್ರಂಥಾಲಯ ಎಂದಾಕ್ಷಣ ನಮ್ಮ ಕಣ್ಮುಂದೆ ಬರುವುದು ಪುಸ್ತಕಗಳ ಭಂಡಾರ. ಆದರೆ "ಹಳೇ ಬೇರು ಹೊಸ ಚಿಗುರು" ಎಂಬಂತೆ ಹೊಸ ವೈವಿಧ್ಯತೆಯನ್ನು ಹೊತ್ತು ತಂದಿದೆ ನಮ್ಮ ಅರಿವಿನ 'ಅರಮನೆ ಅರಮನೆ' ಗ್ರಂಥಾಲಯ. ಹಲವಾರು ಚಟುವಟಿಕೆಗಳಲ್ಲಿ M.L.L.(ಕನಿಷ್ಠ ಕಲಿಕಾ ಮಟ್ಟ) ಕೂಡ ಒಂದು. ವಿದ್ಯಾರ್ಥಿ ಕೇಂದ್ರಿತ ಚಟುವಟಿಕೆಯ ವ್ಯವಸ್ಥಾ ದೃಷ್ಟಿಕೋನದಿಂದ ಎಂ.ಎಲ್.ಎಲ್. ಚಟುವಟಿಕೆಯಾಧಾರಿತ ಕಲಿಕೆಯನ್ನು ಅಳವಡಿಸಿ ವಿದ್ಯಾರ್ಥಿಗಳಿಗೆ ಬೋಧಿಸಲಾಗುತ್ತಿದೆ. ಇದರ ಮುಖ್ಯ ಉದ್ದೇಶ ಕಷ್ಟಕರವಾದಂತಹ ಕಲಿಕಾಂಶಗಳನ್ನು ಚಟುವಟಿಕೆಯ ಮೂಲಕ ಸುಲಭವಾಗಿ ಅರ್ಥಮಾಡಿಸುವುದಾಗಿದೆ.

**ಸುರೇಶ್ ಗುಂಡ್ಲುಪೇಟೆ ಸಹಾಯಕ ಯೋಜನಾ ಸಂಯೋಜಕರು**

## ನಿಮಗಿದೂ ಗೊತ್ತೆ?

1) ವಿಂಗ್ಸ್ ಆಫ್ ಫೈರ್ ಪುಸ್ತಕದ ಕರ್ತೃ ಯಾರು?
2) ಅತ್ಯಂತ ಹಗುರವಾದ ಅನಿಲ ಯಾವುದು?
3) ಸಣ್ಣ ಕಥೆಗಳ ಜನಕ ಯಾರು?
4) ಅತ್ಯಂತ ಎತ್ತರವಾದ ವ್ಯಕ್ತಿ ಪ್ರತಿಮೆ ಎಲ್ಲಿದೆ?
5) ದ್ರವರೂಪದ ಲೋಹ ಯಾವುದು?
6) ಮೌರ್ಯ ಸಾಮ್ರಾಜ್ಯದ ಸ್ಥಾಪಕ ಯಾರು?
7) ವಿಟಮಿನ್ ಡಿ ಯಾವುದರಿಂದ ದೊರೆಯುತ್ತದೆ?
8) ತಾಪವನ್ನು ಅಳೆಯಲು ಬಳಸುವ ಸಾಧನ ಯಾವುದು?
9) ಚಲನೆಯ ನಿಯಮವನ್ನು ನಿರೂಪಿಸಿದವರಾರು?
10) ರೇಖಾಗಣಿತದ ಪಿತಾಮಹಾ ಯಾರು?